**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ</u>**

**<u>ಸಿಸಿ ಸಂಖ್ಯೆ: 827/2018</u>**

**<u>ಪಿರ್ಯಾದಿದಾರರು:</u>** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**<u>ಆರೋಪಿತರು:</u>** ರವಿಕುಮಾರ ಬಿನ್ ಜಯರಾಮಯ್ಯ,
ಸುಮಾರು 32 ವರ್ಷ ವಯಸ್ಸು,
ವಾಸ: ಚನ್ನೇನಹಳ್ಳಿ ಗ್ರಾಮ,
ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ.

**<u>ಹೆಚ್ಚುವರಿ ದೋಷಾರೋಪಣೆ</u>**

**ದೀಪು ಬಿ.ಸಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ: 17.03.2018 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಗೂರನಹಳ್ಳಿ ಮಂಠಿಯಲ್ಲಿ, ಸಾಕ್ಷಿ.1 ಮತ್ತು 2 ರವರು ಹಾಗೂ ಅವರ ಮಗ ಹಾಸನಕ್ಕೆ ಹೊರಡುವ ಸಲುವಾಗಿ ತಯಾರಾಗುತ್ತಿದ್ದಾಗ, ನೀವು ಅವರ ಮನೆ ಬಳಿ ಹೋಗಿ ಸಾಕ್ಷಿ.1 ಮತ್ತು 2 ರವರೊಂದಿಗೆ ಜಗಳ ತೆಗೆದು, ಜಗಳ ಬಿಡಿಸಲು ಬಂದ ಚಾಸಾ.2 ರವರಿಗೆ ಚಪ್ಪಲಿಯಿಂದ ಮೈಗೆ ಹೊಡೆದು, ಅವರಿಗೆ ಅವಮಾನನಿಸಿ, ಆ ಮೂಲಕ ಆರೋಪಿಯಾದ ನೀವು **ಭಾರತೀಯ ದಂಡ ಸಂಹಿತೆ ಕಲಂ: 355** ರಡಿಯಲ್ಲಿ

ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆ ನಿಮಗೆ ತಿಳಿಯಿತೆ?

ಉತ್ತರಃ  ಅರ್ಥವಾಯಿತು

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಉತ್ತರಃ ವಿಚಾರಣೆಯಾಗಬೇಕು

(ಈ ದೋಷರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ/ಗಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿ/ಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **30.12.2024**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.